ಶ್ರೀ ಎಸ್. ಆರ್. ಬೊವಮ್ಮಾಯಿ (ಕಂದಾಯ ಸಚಿವರು).— ಅಧ್ಯಕ್ಷರೇ, ಬಡ ಗೇಣಿದಾರರಿಗೆ ಸ್ವಯಂ ಭೂಮಿಯನ್ನು ಹೊಂದಲು ಅವಕಾಶ ಮಾಡುವ ಸಲುವಾಗಿ ಮತ್ತು ಹೆಚ್ಚಿನ ಭೂಮಿಯನ್ನು ಹೊಂದಿರುವ ಜಮೀನುದಾರರಿಂದ ಹೆಚ್ಚುವರಿ ಭೂಮಿಯನ್ನು ಸರ್ಕಾರವು ಪಡೆದು ಭೂರಹಿತರಿಗೂ ಹರಿಜನ ಗಿರಿಜನರಿಗೂ ಹಂಚುವ ಉದ್ದೇಶದಿಂದ ೧೯೬೧ರಲ್ಲಿ ಭೂಸುಧಾರಣೆ ಕಾಯಿದೆಯನ್ನು ಸರ್ಕಾರವು ಅಂಗೀಕರಿಸಿತು ಇಂತಹ ಸಂದರ್ಭದಲ್ಲಿ ಗೇಣಿದಾರರ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಕಲಂ ೪೫ರ ಭೂಸುಧಾರಣಾ ಕಾಯಿದೆಯ ಪ್ರಕಾರ ಪ್ರತಿ ತಾಲ್ಲೂಕಿಗೂ ಭೂನ್ಯಾಯ ಮಂಡಲಿಗಳನ್ನು ರಚಿಸಲಾಯಿತು. ಈ ಮಂಡಲಿಗಳಲ್ಲಿ ಒಬ್ಬ ಕಂದಾಯ ಅಧಿಕಾರಿಯು ಅಧ್ಯಕ್ಷರಾಗಿ ನಾಲ್ಕು ಜನರ ಅಧಿಕಾರೇತರ ಸದಸ್ಯರ ನಾಮಕರಣಕ್ಕೆ ಅವಕಾಶವಿದೆ. ಈ ನಾಲ್ವರಲ್ಲಿ ಒಬ್ಬರು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪ್ರತಿನಿಧಿಗಳು ಇರುತ್ತಾರೆ.

ಬೇರೆ ಮೂವರಲ್ಲಿ ವಿಧಾನ ಮಂಡಲದ ಸದಸ್ಯರನ್ನಾಗಲೀ ಅಥವಾ ಜಿಲ್ಲಾ ಪರಿಷತ್ತಿನ ಸದಸ್ಯರನ್ನಾಗಲೀ ನಾಮಕರಣ ಮಾಡಲು ಕಾನೂನಿನಲ್ಲಿ ಯಾವ ತೊಂದರೆಯೂ ಇಲ್ಲ. ಈ ನ್ಯಾಯ ಮಂಡಲಿಗಳ ಕೆಲಸ ದಕ್ಷತೆಯಿಂದ ಹಾಗೂ ತ್ವರಿತಗತಿಯಲ್ಲಿ ಸಾಗಬೇಕೆಂದು ಸಮಾಜದ ವಿವಿಧ ವರ್ಗಗಳ ನಾಲ್ಕೇ ಜನ ಸರ್ಕಾರೇತರ ಸದಸ್ಯರ ನಾಮಕರಣಕ್ಕೆ ಅವಕಾಶವಿದೆ.

ಮಾನ್ಯ ಸದಸ್ಯರು ಹೇಳಿದಂತೆ ಇತ್ತೀಚೆಗೆ ನ್ಯಾಯ ಮಂಡಲಿಗಳಲ್ಲಿ ನಿರ್ಣಯ ಗೇಣಿದಾರರ ವಿರುದ್ಧವಾಗಿದೆ ಎನ್ನುವುದಕ್ಕೆ ಆಧಾರವಿಲ್ಲ. ಏಕೆಂದರೆ ನ್ಯಾಯ ಮಂಡಲಿಗಳು ಜಮೀನಿನ ಯಾವತ್ತೂ ದಾಖಲೆಗಳನ್ನು ಮತ್ತು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ ನಿರ್ಣಯ ಕೊಡುತ್ತವೆ. ಆದಾಗ್ಯೂ ಗೇಣಿದಾರರಿಗೆ ನ್ಯಾಯ ದೊರಕದೇ ಹೋದರೆ ಅವನ ಅನುಕೂಲಕ್ಕಾಗಿ ಈ ಜಿಲ್ಲಾ ಮಟ್ಟದಲ್ಲಿ ಅಪೀಲು ಪ್ರಾಧಿಕಾರಗಳನ್ನು ಸರ್ಕಾರವು ರಚಿಸಿದೆ. ಕಾರಣ ಈಗ ಗೇಣಿದಾರನು ರಾಜ್ಯದ ಶ್ರೇಷ್ಠ ನ್ಯಾಯಾಲಯಕ್ಕೆ ಬರುವ ತೊಂದರೆ ಕಡಿಮೆಯಾಗಿದೆ.

ಆದ್ದರಿಂದ ಈಗಿನ ಕಾನೂನಿನಲ್ಲಿ ಹಾಲಿ ಇರುವ ವಿಧಾನ ಮಂಡಲದ ಸದಸ್ಯರನ್ನಾಗಲೀ ಅಥವಾ ಜಿಲ್ಲಾ ಪರಿಷತ್ತಿನ ಸದಸ್ಯರನ್ನಾಗಲೀ ಭೂನ್ಯಾಯ ಮಂಡಲಿಗೆ ನಾಮಕರಣ ಮಾಡಲು ಆಸ್ಪದವಿರುವುದರಿಂದ ಕಾನೂನಿನ ತಿದ್ದುಪಡಿಯ ಅವಶ್ಯಕತೆಯಿಲ್ಲ.

8 ಅಫಜಲಪುರ ಕ್ಷೇತ್ರದ ಏತ ನೀರಾವರಿ ಯೋಜನೆಯ ಬಗ್ಗೆ

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ).—ನನ್ನ ಕ್ಷೇತ್ರದ ಏತ ನೀರಾವರಿ ಯೋಜನೆಯು ಏಳನೇ ಪಂಚವಾರ್ಷಿಕ ಯೋಜನೆಯ ಪಟ್ಟಿಯಲ್ಲಿ ಸೇರಿಸಲಾಗಿದ್ದರೂ ಇಲ್ಲಿಯವರೆಗೆ ಈ ಯೋಜನೆಯ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮವೇನು ? ಸತತವಾಗಿ ಕಳೆದ ನಾಲ್ಕು ವರ್ಷದಿಂದ ಮಳೆಯ ಅಭಾವದಿಂದ ಬರಗಾಲಕ್ಕೆ ತುತ್ತಾಗುತ್ತಿರುವ ನನ್ನ ಮತ ಕ್ಷೇತ್ರ ಈ ಯೋಜನೆಯಿಂದ ತಾಲ್ಲೂಕಿನ ಉದ್ದಕ್ಕೂ ಅರವತ್ತು ಸಾವಿರ ಎಕರೆಗಳು ನೀರಾವರಿಯಾಗುವ ಲಕ್ಷಣಗಳು ಇವೆ. ಅಲ್ಲದೆ ಶಾಶ್ವತವಾಗಿ ಬರ ಪರಿಹಾರವಾಗುವ ಅಂತಹ ಮಹತ್ವದ ಯೋಜನೆ ಆಗಿದೆ. ಆದ್ದರಿಂದ ನಾನು ತಾಲ್ಲೂಕಿನ ಬರದ ದವಡೆಯಲ್ಲಿ ಸಿಕ್ಕಿರುವ ಜನರಿಗೆ ಅನುಕೂಲ ಕಲ್ಪಿಸಿ ಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ ಆದಷ್ಟು ಬೇಗ ಈ ಯೋಜನೆಯನ್ನು ಪ್ರಾರಂಭಿಸಿ ಈ ಕೊರತೆಯನ್ನು ನಿವಾರಣೆ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಸನ್ಮಾನ್ಯ ಸದಸ್ಯರ ಕಳಕಳಿಯನ್ನು ಸರಕಾರ ಅರ್ಥಮಾಡಿಕೊಂಡಿದೆ. ಇದರ ಬಗ್ಗೆ ನಾನು ನನ್ನ ಇಲಾಖೆಗಳ ಬೇಡಿಕೆ ಮೇಲೆ ಉತ್ತರ ಕೊಡುವಾಗ, ಹೇಳುತ್ತೇನೆ.

9 ಎರಡನೆಯ ಮಹಾಯುದ್ಧದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಕೃಷಿ ಮಾಡಲು ಗೇಣಿ ರೂಪದಲ್ಲಿ ಭೂಮಿಗಳನ್ನು ಕೊಡುವ ಬಗ್ಗೆ

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಕೊಡಗಿನ ನಿವಾಸಿಗಳ ಪೈಕಿ ಬಹಳಷ್ಟು ಮಂದಿ ಎರಡನೇ ಮಹಾಯುದ್ಧದಲ್ಲಿ ಸೇವೆ ಸಲ್ಲಿಸಿದ್ದಕ್ಕೆ ಆಗಿನ ಸರಕಾರದ ರಿಲೀಸ್ ಆರ್ಡರ್ ಪ್ರಕಾರ